ಅ) (1) ಮಾಗಡಿ ರೋಡ್ ಪೋಲೀಸ್ ವಸತಿಗಳಿಗೆ ಕೊಳವೆ ಬಾವಿಗಳ ಮೂಲಕ ನೀರನ್ನು ಒದಗಿಸಲಾಗುತ್ತಿದೆ.

(2) ಜಾರಕ ಬಂಡೆ ಕಾವಲ್‌ನಲ್ಲಿನ ವಸತಿಗಳಿಗೆ ನೀರನ್ನೊದಗಿಸುವ ಬಗ್ಗೆ, ಬಿ.ಡಿ.ಎ., ಬಿ.ಡಬ್ಲ್ಯೂ.ಎಸ್.ಎಸ್. ಮತ್ತು ಪೋಲೀಸ್ ಇಲಾಖೆಯವರೊಂದಿಗೆ ಸಮಾಲೋಚಿಸಿ ನೀರು ಸರಬರಾಜನ್ನು ಅಭಿವೃದ್ಧಿ ಪಡಿಸಲೂ ಕ್ರಮ ಕೈಗೊಳ್ಳಲಾಗುತ್ತದೆ.

ದಕ್ಷಿಣ ಕನ್ನಡದಲ್ಲಿ ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ನಿರ್ಮಿಸಿದ ಮಾನವ ದಿನಗಳ ಕುರಿತು.

1873-ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) ; ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಜವಾಹರ್ ರೋಜ್‌ಗಾರ್ ಯೋಜನೆಯಡಿ 1989-90, 90-91ನೇ ಡಿಸೆಂಬರ್ ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಮಾನವ ದಿನಗಳನ್ನು ಸೃಷ್ಟಿಸಲಾಯಿತು? ಹಾಗೂ ಈ ಉದ್ದೇಶಕ್ಕಾಗಿ ಖರ್ಚು ಮಾಡಲಾದ ಹಣವೆಷ್ಟು?

ಆ) ಇದರಲ್ಲಿ ಕಾರ್ಮಿಕರಿಗೆ ವೇತನದ ಒಂದು ಭಾಗವಾಗಿ ನೀಡಲಾದ ಆಹಾರ ಧಾನ್ಯಗಳ ಒಟ್ಟು ಮೌಲ್ಯವೆಷ್ಟು?

ಶ್ರೀ. ಕೆ.ಪೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 1989-90ನೇ ಸಾಲಿನಲ್ಲಿ 18.0578 ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು, ಈ ಬಗ್ಗೆ 402.89 ಲಕ್ಷ.ರೂ.ಗಳನ್ನು ವಿನಿಯೋಗವಾಗಿದೆ. 90-91ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ 4.77076 ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದ್ದು, ಈ ಬಗ್ಗೆ 122.735 ಲಕ್ಷ ರೂ.ಗಳ ವಿನಿಯೋಗವಿಗಿದೆ.

ಆ) 1989-90ನೇ ಸಾಲಿನಲ್ಲಿ ರೂ. 45.405 ಲಕ್ಷ ರೂ. ಹಾಗೂ 90-91ರಲ್ಲಿ (ಡಿಸೆಂಬರ್ ಅಂತ್ಯದವರೆಗೆ) ರೂ.10.129 ಲಕ್ಷ ಮೌಲ್ಯದ ಆಹಾರ ಧಾನ್ಯಗಳನ್ನು ವೇತನದ ಭಾಗವಾಗಿ ಕಾರ್ಮಿಕರಿಗೆ ಹಂಚಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ

1874 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಲದ ಮಳೆಗಾಲದ ಮೂತುವಿನಲ್ಲಿ ಯಾವ ಯಾವ ಕಡೆಗಳಲ್ಲಿ ಸಮುದ್ರ ಕೊರೆತ ಉಂಟಾಗಿದೆಯೆಂಬ ವರದಿ ಸರ್ಕಾರಕ್ಕೆ ಬಂದಿದೆಯೆ (ಸ್ಥಳದ ವಿವರ ಮತ್ತು ಉಂಟಾದ ಹಾನಿಯ ಬಗ್ಗೆ ವಿವರವನ್ನೊದಗಿಸುವುದು)

ಆ) ಉಡುಪಿ ತಾಲ್ಲೂಕು ಕೋಡಿಬೆಂಗ್ರೆಯಲ್ಲಿ ಸಮುದ್ರ ಕೊರೆತಕ್ಕೆ ಒಳಗಾದ ಪ್ರದೇಶದ ವಿಸ್ತೀರ್ಣವೆಷ್ಟು ಉದ್ದ -ಅಗಲ ಹಾಗೂ ಸಂತ್ರಸ್ತರ ಮತ್ತು ಹಾನಿಯ ವಿವರ ನೀಡುವುದು

ಇ) ಈ ಸಂಬಂಧದಲ್ಲಿ ಸರ್ಕಾರದವರು ಕೈಗೊಂಡ ಪರಿಹಾರ ಕಾರ್ಯಕ್ರಮಗಳೇನು?

ಈ) ಕೇರಳ ರಾಜ್ಯದಲ್ಲಿ ಇರುವ ಕರಾವಳಿ ಪ್ರದೇಶದಲ್ಲಿರುವಂತೆ ಶಾಶ್ವತ ತಡೆಗೋಡೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ನಿರ್ಮಿಸುವ ಯೋಜನೆಯು ಸರ್ಕಾರದ ಮುಂದಿವೆಯೆ, ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು): ಅ) ಬಂದಿದೆ. ಸಮುದ್ರ ಕೊರೆತಕ್ಕೊಳಗಾದ ಸ್ಥಳಗಳು :

(1) ಮಂಗಳೂರು ತಾಲ್ಲೂಕಿನ ಉಳ್ಳಾಲ ಮತ್ತು ಮುಕ್ಕ (2) ಉಡುಪಿ ತಾಲ್ಲೂಕಿನ ಹೆಜಮಾಡಿಕೋಡಿ, ಬಡಾಉಚ್ಚಿಲ, ಉಳಿಯಾರಗೊಳಿಪಡುಕೆರೆ, ಅಡ್ಡಬೆಂಗ್ರೆ ಮತ್ತು ಕೋಡಿಬೆಂಗ್ರೆ (3) ಕುಂದಾಪುರ ತಾಲ್ಲೂಕಿನ ಕಸಬಾ ಕೋಡಿ ಮತ್ತು ಗುಜ್ಜಾಡಿ. (ಹಾನಿಯ ವಿವರವನ್ನು ಲಗತ್ತಿಸಲಾಗದೆ)

ಆ) ಕೋಡಿಬೆಂಗ್ರೆಯಲ್ಲಿ ಹಾನಿಗೊಳಗಾದ ಪ್ರದೇಶದ ವಿಸ್ತೀರ್ಣ ಉದ್ದ ಸುಮಾರು 920 ಮೀ; ಅಗಲ 15ರಿಂದ 20 ಮೀ ; ಒಟ್ಟು 14 ಜನರ ಆಸ್ತಿ ಪಾಸ್ತಿಗಳಿಗೆ ಹಾನಿ ಉಂಟಾಗಿದೆ. 51 ತೆಂಗಿನ ಮರಗಳು ಮತ್ತು 37 ಗಾಳಿ ಮರಗಳು ಸಮುದ್ರದ ಪಾಲಾಗಿವೆ.

ಇ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಮೇಲ್ಕಂಡ ಎಲ್ಲಾ ಸ್ಥಳಗಳಲ್ಲಿ ಸಮುದ್ರ ಕೊರೆತ ಪ್ರತಿಬಂಧಿಸಲು ತುರ್ತು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇರಳ ರಾಜ್ಯದಲ್ಲಿರುವಂತೆ ಶಾಶ್ವತ ತಡೆಗೋಡೆಗಳನ್ನು ರಾಜ್ಯ ಸರ್ಕಾರದ ವತಿಯಿಂದ ಈಗಾಗಲೇ ಮಾಡಲಾಗುತ್ತಿದೆ. 1991ರ ಮಾರ್ಚ್ ಅಂತ್ಯದ ವೇಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 7.965 ಕಿ.ಮೀ. ಉದ್ದ ತಡೆಗೋಡೆಗಳನ್ನು 340.188 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ರಾಜ್ಯದಲ್ಲಿ ಸಮುದ್ರ ಕೊರೆತ ತಡೆಗೋಡೆಗಳನ್ನು ನಿರ್ಮಿಸಲು ರೂ. 145 ಕೋಟಿ, ರೂ. 40 ಕೋಟಿ ಮತ್ತು ರೂ. 15 ಕೋಟಿ 3 ಸಮಗ್ರ ಯೋಜನೆಗಳನ್ನು ತಯಾರಿಸಿ ಕೇಂದ್ರ ಸರ್ಕಾರದ ಆರ್ಥಿಕ ನೆರವಿಗಾಗಿ ಕಳುಹಿಸಲಾಗಿದೆ.

ಈ ಸಲದ ಮಳೆಗಾಲದ ಋತುವಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಕಡೆ ತೀವ್ರ ಸಮುದ್ರ ಕೊರೆತ ಉಂಟಾಗಿದ್ದು ಅವುಗಳ ವಿವರಗಳು ಈ ಕೆಳಕಂಡಂತಿವೆ.

ಸಂಖ್ಯೆ	ಸಮುದ್ರ ಕೊರೆತಕ್ಕೊಳಗಾದ ಪ್ರದೇಶದ ಹೆಸರು ಮತ್ತು ಉದ್ದ	ಹಾನಿಯ ವಿವರ
1.	ಮಂಗಳೂರು ತಾಲ್ಲೂಕು ಉಳ್ಳಾಲ 230 ಮೀ.	ಸುಮಾರು 20 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 3 ಮನೆಗಳು ಭಾಗಶ: ಹಾನಿಗೊಳಗಾಗಿದೆ.
2.	ಅದೇ- ಮುಕ್ಕ 320 ಮೀ.	ಸುಮಾರು 15 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 30 ಮೀ. ಉದ್ದಕ್ಕೆ ಮೀನುಗಾರಿಕಾ ರಸ್ತೆ ಸಮುದ್ರ ಪಾಲಾಗಿರುತ್ತದೆ. 2 ಮನೆಗಳು ಭಾಗಶ: ಹಾನಿಗೊಂಡಿವೆ. 10 ತೆಂಗಿನ ಮರ ಮತ್ತು 25 ಗಾಳಿ ಮರಗಳು ಕೊಚ್ಚಿ ಹೋಗಿವೆ.

3.	ಉಡುಪಿ ತಾಲ್ಲೂಕು ಹೆಜಮಾಡಿ ಕೋಡಿ 100 ಮೀ.	ಸುಮಾರು 20 ಮೀ. ಅಗಲಕ್ಕೆ ಭೂ ಪ್ರದೇಶವು, 12 ತೆಂಗಿನ ಮರಗಳು ನಾಶವಾಗಿವೆ. 50 ಮೀ. ಉದ್ದಕ್ಕೆ ರಸ್ತೆಯು ನೀರು ಪಾಲಾಗಿರುತ್ತದೆ.
4.	-ಅದೇ- ಬಡ ಉಚ್ಚಿಲ 320 ಮೀ.	ಸುಮಾರು 30 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 30 ತೆಂಗಿನ ಮರಗಳು ಉರುಳಿ ಬಿದ್ದಿರುತ್ತದೆ.
5.	-ಅದೇ- ಉಳಿಯಾರಗೋಳಿ ಪಡುಕೆರೆ 200 ಮೀ.	ಸುಮಾರು 10 ಮೀಟರ್ ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದ್ದು 200 ಮೀ. ಉದ್ದದ ಮೀನುಗಾರಿಕಾ ರಸ್ತೆಯು ಭಾಗಶ: ಹಾನಿಗೊಂಡಿದೆ.
6.	-ಅದೇ- ಅಡ್ಡಬೆಂಗ್ರೆ 300 ಮೀ.	ಸುಮಾರು 15 ಮೀ.ರಿಂದ 20 ಮೀ. ಅಗಲಕ್ಕೆ ಭೂ ಪ್ರದೇಶವು ಸಮುದ್ರ ಪಾಲಾಗಿದೆ.
7.	-ಅದೇ- ಕೋಡಿಬೆಂಗ್ರೆ 920ಮೀ.	ಸುಮಾರು 15 ರಿಂದ 20 ಮೀ. ಅಗಲಕ್ಕೆ ಭೂ ಪ್ರದೇಶರು ಸಮುದ್ರ ಪಾಲಾಗಿದ್ದು 51 ತೆಂಗಿನ ಮರಗಳು ಮತ್ತು 37 ಗಾಳಿ ಮರಗಳು ಸಮುದ್ರ ಪಾಲಾಗಿವೆ. ಒಟ್ಟು 14 ಜನರ ಆಸ್ತಿ ಪಾಸ್ತಿಗಳಿಗೆ ಹಾನಿ ಉಂಟಾಗಿದೆ.
8.	ಕುಂದಾಪುರ ತಾಲ್ಲೂಕು ಕಸಬಾ ಕೋಡಿ 200 ಮೀ.	ಮೀನುಗಾರಿಕಾ ರಸ್ತೆಯು ಅಪಾಯದ ಹಂತದಲ್ಲಿದೆ. ಕರ್ನಾಟಕ ವಿದ್ಯುತ್ ಮಂಡಳಿಯ ಒಂದು ಟ್ರಾನ್ಸ್‌ಫಾರ್ಮರ್ ಕುಸಿಯುವ ಹಂತದಲ್ಲಿದೆ.
9.	-ಅದೇ- ಗುಜ್ಜಾಡಿ 75 ಮೀ.	ಈ ಸ್ಥಳದಲ್ಲಿರುವ ಮೀನುಗಾರರ ಹಾಗೂ ಪರಿಶಿಷ್ಟ ಜಾತಿಗೆ ಸೇರಿದವರ ಮನೆಗಳು ಮತ್ತು ಗುಡಿಸಲುಗಳು ಕೂಡ ಅಪಾಯದ ಅಂಚಿನಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆಗಳ ದುರಸ್ತಿಯ ಬಗ್ಗೆ

1918 -ಶ್ರೀ ಪಿ. ಬಸವರಾಜ್(ಬ್ರಹ್ಮಾವರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಪರೀತ ಮಳೆಯಿಂದಾಗಿ ರಸ್ತೆಯಗಳೆಲ್ಲಾ ಮೂಲ ಸ್ವರೂಪ ಕಳೆದುಕೊಂಡಿರುವುದು ನಿಜವಲ್ಲವೆ:*

ಆ) *ಇದರಿಂದ ಸಾರ್ವಜನಿಕರಿಗೆ ರಸ್ತೆಯ ಮೇಲೆ ಸಂಚಾರಕ್ಕೆ ಮತ್ತು ವಾಹನಗಳ ಓಡಾಟಕ್ಕೆ ಕಷ್ಟಕರ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:*